## ಪದಬಂಧ



**ಎಡದಿಂದ ಬಲಕ್ಕೆ**

1. ಎಲ್ಲವನ್ನೂ ಹೀಗೆ ಸುಮ್ಮನೇ ತರುವ ಕೆಲಸಕ್ಕೆ ಒಪ್ಪಿಗೆ ಇಲ್ಲ 4
3. ವಿಪ್ರರಂತೆ ವೇಷ ಧರಿಸಿ ಬಂದರೆ ಮಾತ್ರ ಅಲ್ಲಿ ಒಳಹೋಗಲು ಅವಕಾಶ 3
4. ಪುಣ್ಯವನ್ನು ಗಳಿಸಬೇಕೆಂದು ನಡೆನುಡಿ ಎಲ್ಲವೂ ಇಷ್ಟು ನಯ 3
6. ನಾಟ್ಯ ಕಲೆಗೇ ಅರಸನೆಂದರೆ ಈಶ್ವರನೇ ತಾನೇ? 4
7. ಪೆದ್ದನ ಕೈಗೆ ಹೇಗೆ ಬಂತು ಕಷ್ಟಕಾಲಕ್ಕೆ ಇಟ್ಟ ಹಣ? 4
9. ಹೂಕೋಸು ಕೊಳ್ಳಲು ಇಂಥದೆಲ್ಲ ದುಡ್ಡು ಬೇಕೇ? 4
11. ಖಾಸಗಿ ಬಳಕೆಗೆ ಕೊಂಡದ್ದು ಇಂಥ ಹಿತಕರ ಕುರ್ಚಿ 4
13. ನಾಕ ನರಕಗಳಿರಲಿ, ನಕ್ಷತ್ರಕ್ಕೆ ಹೋದರೂ ಬೆನ್ನು ಹತ್ತಿ ಪೀಡಿಸುವವ 4
15. ಮನ ಕೆಡಿಸಿ ನಡುಗುವಂತೆ ಮಾಡಿದ್ದು ಆತನ ಕೆಟ್ಟ ಮಾತು 4
17. ಕಳ್ಳರ ಕಾಟ ಪರಿಹರಿಸಲು ಹೀಗೆ ನಿರಂತರ ಕಾವಲು 3
18. ಹಣ್ಣುಗಳನ್ನು ಜೋಡಿಸಿಡಲು ಬಳಸಿದ್ದು ಇದೇ ಮಣ್ಣಿನ ದೀಪ 3
19. ತಮ್ಮ ತಮ್ಮದೇ ವ್ಯವಹಾರದಲ್ಲೂ ಏನೀ ಮೇಲುಕೀಳು ಭಾವನೆ? 4

**ಮೇಲಿನಿಂದ ಕೆಳಕ್ಕೆ**

1. ಆಶ್ಚರ್ಯವೇನಿಲ್ಲ; ಅದೇ ಅವನ ಊಟ 3
2. ಅನುಜನ ಜೊತೆಗೇ ಬಂದಿದ್ದಾನೆ ನೋಡಿ, ಆತನ ಮಗ 3
3. ಆ ಊರಿನಲ್ಲಿ ಹಂಚುವ ಪ್ರಸಾದ ತುಂಬ ವಿಖ್ಯಾತ 3
5. ಪುಣ್ಯ ಗಳಿಕೆಗೆ ಓದಲು ಕೇಳಲು ಪುರಾತನ ಕಥೆ 3
7. ಆಶಾಪಾಶಕ್ಕೆ ಸಿಲುಕಿರುವವರೇ ಅಲ್ಲೆಲ್ಲ ಅಕ್ಕಪಕ್ಕ 4
8. ನಾಗವ್ವನ ಕಂಠದಲ್ಲಿ ಹೀಗೊಂದು ಹೊಸ ಹಾಡು 4
9. ಹನುಮನ ಹಾರಾಟಕ್ಕೆ ಅಡ್ಡಿಯಾಗುವುದಿಲ್ಲ ಯಾವುದೇ ಗಾಳಿ ಪರಿಸ್ಥಿತಿ 4
10. ಸ್ವಾರಸ್ಯವೇನೂ ಕಾಣಲಿಲ್ಲ ; ಆದರೂ ಅದು ದೇವತಾ ಪ್ರಪಂಚ 4
12. ಸ್ವಲ್ಪ ಸ್ವಲ್ಪವೇ ನಡೆಯಿತಾದರೂ ಅದೆಲ್ಲ ಸರಸದ ಮಾತುಕತೆ 3
14. ಎಲ್ಲರನ್ನೂ ಕ್ಷೇಮವಾಗಿ ಇರಿಸುವಲ್ಲಿ ಆಕೆಗೆ ಭಾರೀ ಸಾಮರ್ಥ್ಯ ಇದೆ 3
15. ಆ ತರಕಾರಿಯನ್ನು ತಿಂದೊಡನೆ ಮೈಎಲ್ಲ ನವೆಯೋ ನವೆ 3
16. ಹುಂಡಿಗಳನ್ನಿತ್ತಿರುವ ಮನೆಯಲ್ಲಿ ಉಪ್ಪರಿಗೆ ತಲೆಕೆಳಗು! 3

---

### 10–10–2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಸದುಪಾಯ 3. ಭ್ರಮಣ 4. ವರಾತ 6. ಸಮಾಧಾನ 7. ಪರಿಣಯ 9. ಮರಕತ 11. ನವನೀತ 13. ರಹದಾರಿ 15. ಕಾರಕೂನ 17. ವರ್ಧನ 18. ಗಣಿತ 19. ನಗನಾಣ್ಯ

**ಮೇಲಿನಿಂದ ಕೆಳಕ್ಕೆ**

1. ಸರಸ 2. ಯವನ 3. ಭ್ರಮಣ 5. ತತ್ತರ 7. ಪತನ 8. ಯನ್ಮತ (=ತನ್ಮಯ ತಲೆಕೆಳಗು) 9. ಮಧುರ 10. ತರ್ಕಾರಿ 12. ನೀರವ 14. ಹರಿತ 15. ಕಾನನ 16. ನಗಣ್ಯ

ಪ್ರಶ್ನಾಂಕಣ

# ಕಡಲಲ್ಲಿ ಎಷ್ಟಿದೆ ಜೀವಿ ವೈವಿಧ್ಯ?

ಅತ್ಯಂತ ಇತ್ತೀಚಿನ ಒಂದು ವೈಜ್ಞಾನಿಕ ಸರ್ವೇಕ್ಷಣೆಯ ಪ್ರಕಾರ ಭೂ ಜೀವಜಾಲದಲ್ಲಿ ಮನುಷ್ಯರ ಈಗಿನ (ಎಂದರೆ ನಮ್ಮ) ಒಂದೇ ಒಂದು ಪ್ರಭೇದವನ್ನೂ (ಹೋಮೊ ಸೇಪಿಯನ್ಸ್) ಸೇರಿಸಿದಂತೆ ಈವರೆಗೆ ಗುರುತಿಸಿ ಹೆಸರಿಸಲಾಗಿರುವ ಪ್ರಭೇದಗಳ ಸಂಖ್ಯೆ ಹತ್ತೊಂಬತ್ತು ಲಕ್ಷ. ಸಕಲ ಸಸ್ಯಗಳ, ಪ್ರಾಣಿಗಳ ಮತ್ತು ಸೂಕ್ಷ್ಮ ಜೀವಿ ಪ್ರಭೇದಗಳ ಒಟ್ಟು ಸಂಖ್ಯೆ ಇದು. ಆದರೆ ವಿಸ್ಮಯ ಏನೆಂದರೆ ವಿದ್ವಾಂಸರ ಪ್ರಕಾರ, ಭೂಮಿಯಲ್ಲಿದ್ದೂ ನಮಗಿನ್ನೂ ತಿಳಿದೇ ಇಲ್ಲದ ಜೀವಿ ಪ್ರಭೇದಗಳು 85 ಲಕ್ಷ ಆಗುವಷ್ಟಿವೆ! ಅವನ್ನೂ ಸೇರಿಸಿದರೆ ಜಗದ ಒಟ್ಟು ಜೀವಿ ಪ್ರಭೇದಗಳ ಸಂಖ್ಯೆ ಒಂದು ಕೋಟಿಯನ್ನು ಮೀರುತ್ತದೆ.

ಈ ಪೈಕಿ ಸಾಗರದಲ್ಲಿರುವ ಜೀವಿ ಪ್ರಭೇದಗಳು ಎಷ್ಟು?

ನಿಮಗೇ ತಿಳಿದಿರುವಂತೆ, ಸಾಗರಾವಾರ ಭೂ ಮೇಲ್ಮೈನ ಶೇಕಡ 71ರಷ್ಟು ವೈಶಾಲ್ಯವನ್ನು ಆವರಿಸಿದೆ. ಸಹಜವಾಗಿಯೇ ಜಲಧಿಯ ಅಪಾರ ಜಲರಾಶಿಯಲ್ಲೂ ಮೇಲ್ಮೈಯಿಂದ ತಳದವರೆಗೆ ಪ್ಲಾಂಕ್ಟನ್‌ಗಳಿಂದ ತಿಮಿಂಗಿಲಗಳವರೆಗೆ ಪ್ರಾಣಿಗಳು ಮತ್ತು ಸಸ್ಯಗಳ ಜೀವಜಾಲ ನಿಬಿಡವಾಗಿ ಹರಡಿದೆ. ಸಾಗರದಲ್ಲಿ ನೆಲೆಸಿರುವ ಸಸ್ಯ ಮತ್ತು ಪ್ರಾಣಿ ಪ್ರಭೇದಗಳನ್ನು ಗುರುತಿಸಿ ಹೆಸರಿಸುವ ಕೆಲಸವೂ ಬಹು ದೀರ್ಘ ಕಾಲದಿಂದಲೂ ನಡೆದೇ ಇದೆ. ಪತ್ತೆಯಾಗುವ ಪ್ರತಿ ಹೊಸ ಪ್ರಭೇದವನ್ನೂ ತಜ್ಞರು ಗುರುತಿಸಿ, ವರ್ಗೀಕರಿಸಿ, ಅದು ಹೊಸ ಪ್ರಭೇದವೆಂದು ಖಾತ್ರಿಯಾದೊಡನೆ ಒಂದು ವಿಶೇಷ ಪಟ್ಟಿಯಾದ ವರ್ಲ್ಡ್ ರಿಜಿಸ್ಟರ್ ಆಫ್ ಮೆರೈನ್ ಸ್ಪೀಶೀಸ್ (World Register Of Marine Species WoRMS) ನಲ್ಲಿ ದಾಖಲಿಸುತ್ತಿದ್ದಾರೆ. ಜಗದಾದ್ಯಂತ 300 ಜನ ಪರಿಣತರು ಈ ಮಹತ್ವದ ಕೆಲಸವನ್ನು ಮಾಡುತ್ತಿದ್ದಾರೆ!




ಸಾಗರ ಜೀವಿಗಳ ಗಣತಿಗೆ ವಿಜ್ಞಾನಿಗಳು ವಿವಿಧ ಕ್ರಮಗಳನ್ನು ರೂಪಿಸಿದ್ದಾರೆ. ಹಾಗೆ ಈವರೆಗೆ ಪತ್ತೆಯಾಗಿರುವ ಸಕಲ ಸಾಗರ ಜೀವಿ ಪ್ರಭೇದಗಳ ಸಂಖ್ಯೆ 2,42,500. ಆದರೆ ಸ್ಪಷ್ಟವಾಗಿಯೇ ಈ ಸಂಖ್ಯೆ ಇಷ್ಟಕ್ಕೇ ಸೀಮಿತವಲ್ಲ. ಏಕೆಂದರೆ, ಅನ್ವೇಷಕರಿಂದ ಪ್ರತಿವರ್ಷ ಹೊಸದಾಗಿ ಪತ್ತೆಯಾಗುತ್ತಿರುವ ಸಾಗರ ಜೀವಿ ಪ್ರಭೇದಗಳ ಸಂಖ್ಯೆ 2,000ದಷ್ಟಿದೆ. ತಜ್ಞರ ಪ್ರಕಾರ ಕಡಲಿನಲ್ಲಿರುವ ಜೀವಿ ಪ್ರಭೇದಗಳ ಒಟ್ಟು ಸಂಖ್ಯೆ ಕನಿಷ್ಠ 100 ದಶಲಕ್ಷ (10 ಕೋಟಿ) ದಷ್ಟಾದರೂ ಇವೆ. ಆದರೆ, ವಿಪರ್ಯಾಸ ಏನೆಂದರೆ, ಕಡಲಿನಲ್ಲಿರುವ ಜ್ಞಾತಾಜ್ಞಾತ ಜೀವಿಗಳ ಶೇಕಡ 20ರಷ್ಟು ಪ್ರಭೇದಗಳು ಸರ್ವನಾಶದ ಹಾದಿಯಲ್ಲಿವೆ! ಎಂದರೆ ಲಕ್ಷಾಂತರ ಪ್ರಭೇದಗಳದು ನಮಗೆ ತಿಳಿವ ಮೊದಲೇ ಅಳಿದುಹೋಗುವ ಪರಿಸ್ಥಿತಿ! ಎಂಥ ದುರಂತ, ಅಲ್ಲವೇ?

■ ಎನ್‌. ವಾಸುದೇವ್